ದಿನಾಂಕ: 12-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಶ್ರೀ.ಎಮ್.ಬಿ.ಎಚ್. ಪ್ರತಿವಾದಿ 1 ರಿಂದ 5 ರವರ ಪರ ವಕೀಲರಿಂದಃ**

3. ನಮ್ಮ ಮತ್ತು ಪ್ರತಿವಾದಿ 1 ಮತ್ತು 2 ರವರ ನಡುವೆ ಮನ್ನಿಕೇರಿ ಗ್ರಾಮದ ಸರ್ವೆ ನಂ.121/1, 121/2, 122/1 ಮತ್ತು 122/2 ಈ ಆಸ್ತಿಗಳನ್ನು ನನಗೆ ಖರೀದಿ ಕೊಡಲು ಮಾತು ಆಗಿತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ಖರೀದಿ ಕರಾರ ಪತ್ರ ಆಗುವ ಸಮಯದಲ್ಲಿ 5ನೇ ಪ್ರತಿವಾದಿ ಅಪ್ರಾಪ್ತ ವಯಸ್ಕರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಖರೀದಿ ಕರಾರ ಪತ್ರ ನೋಂದ ಆಗುವ ಸಮಯದಲ್ಲಿ ನಾನು ಸರ್ವೆ ನಂ.127/1 ರ ಪಹಣಿ ಪತ್ರಿಕೆಯನ್ನು ನೋಡಿದ್ದೆ. ನಿಪಿ-2 ಮತ್ತು 4 ರಲ್ಲಿ 5ನೇ ಪ್ರತಿವಾದಿಯ ಹೆಸರು ಇದೆ ಎಂದರೆ ಸರಿ.

4. ನನ್ನ ಕುಟುಂಬಕ್ಕೆ 15ಎಕರೆ ಜಮೀನು ಇದೆ. ನನ್ನ 15ಎಕರೆ ಜಮೀನನ್ನು ನಾನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ 15ಎಕರೆ ಜಮೀನನ್ನು ನಾಗನೂರ ಗ್ರಾಮದ ಮಲ್ಲಪ್ಪ ಪಡದಲ್ಲಿ, ಶಾಬಪ್ಪ ಮಾಲದಿನ್ನಿ ಹಾಗೂ ಜೋಕಾನಟ್ಟಿ ಗ್ರಾಮದ ವಿಠ್ಠಲ ಗೌಡಪ್ಪಗೋಳ ಇವರುಗಳು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ.

5. 1 ಮತ್ತು 2ನೇ ಪ್ರತಿವಾದಿಯರಿಗೆ ದಾವಾ ಆಸ್ತಿ ಮಾರಾಟ ಮಾಡುವ ಯಾವುದೇ ಉದ್ದೇಶ ಇಲ್ಲದೇ ಇದ್ದರೂ ಸಹ ಪ್ರತಿವಾದಿಯರು ದಾವಾ

ಓ.ಎಸ್. ನಂಃ 487/2022
ಪಿ.ಡಬ್ಲ್ಯೂ-1 (ಯಲ್ಲಪ್ಪ)

ಆಸ್ತಿಯನ್ನು ನನಗೆ ಮಾರಾಟ ಮಾಡಲು ಒಪಿಪ್ಪಿ ಖರೀದಿ ಕರಾರ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಮನೆತನದ ಆರ್ಥಿಕ ಪರಿಸ್ಥಿತಿ ಚೆನ್ನಾಗಿ ಇದ್ದುದ್ದರಿಂದ ಪ್ರತಿವಾದಿಯರಿಗೆ ದಾವಾ ಆಸ್ತಿ ಮಾರಾಟ ಮಾಡುವ ಪ್ರಮೇಯ ಬಂದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಂದ ಬೇರೆ ಆಸ್ತಿ ಖರೀದಿ ಮಾಡಲು ಮಾತುಕತೆ ಮಾಡಿದ ಅದರ ಭದ್ರತೆಗಾಗಿ ನಿಪಿ-1ನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1ನ್ನು ನನಗೆ ಭದ್ರತೆಗಾಗಿ ಬರೆದುಕೊಟ್ಟಿದ್ದರೂ ಸಹ ಪ್ರತಿವಾದಿಯರು ದಾವಾ ಆಸ್ತಿಯನ್ನು ನನಗೆ ಮಾರಾಟ ಮಾಡಲು ಒಪ್ಪಿ ಬರೆದುಕೊಟ್ಟಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ